# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ ಹೊಳೆನರಸೀಪುರ

## ಸಿಸಿ ನಂ. 608/2025

ಪಿರ್ಯಾದುದಾರರು – ಸರ್ಕಾರದ ಪರವಾಗಿ

ಹೊಳೆನರಸೀಪುರ ನಗರ ಠಾಣಾ ಪೋಲೀಸರು

ವಿರುದ್ಧ

ಆಪಾದಿತರು – ಪುನಿತ್ ಎ.ಇ,
ಬಿನ್.ಈರೇಗೌಡ,
ಸುಮಾರು 34 ವರ್ಷ,
ವಾಸಃ ಅಂಕವಳ್ಳಿ ಗ್ರಾಮ,
ಕಸಬಾ ಹೋಬಳಿ,
ಹೊಳೆನರಸೀಪುರ ತಾಲ್ಲೂಕು,
ಹಾಸನ ಜಿಲ್ಲೆ.

### – ಆಪಾದನೆ –

ಶ್ರೀ ಯೋಗೀಂದ್ರ ಶೆಟ್ಟಿ, ಬಿ.ಕಾಂ., ಎಲ್.ಎಲ್.ಬಿ., ಪ್ರಧಾನ ಸಿವಿಲ್ ನ್ಯಾಯಾದೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹೊಳೆನರಸೀಪುರ ಆದ ನಾನು ಮೇಲ್ಕಂಡ ಆರೋಪಿಯಾದ ನಿಮ್ಮ ಮೇಲೆ ಕೆಳಕಂಡಂತೆ ಆಪಾದನೆಯನ್ನು ಹೊರಿಸುತ್ತಿದ್ದೇನೆ.

ದಿಃ 01.02.2025 ರಂದು ಮಧ್ಯಾಹ್ನ 3.00 ಗಂಟೆ ಸಮಯದಲ್ಲಿ ಚಾ.ಸಾ.1 ಮತ್ತು ಚಾಸಾ.2 ರವರು ತಮ್ಮ ಕೆಲಸದ ನಿಮಿತ್ತ ಹೊಳೆನರಸೀಪುರಕ್ಕೆ ಹೋಗಲೆಂದು ತಮ್ಮ ಬಾಬ್ತು ಕೆಎ–13–ಹೆಚ್.ಬಿ–7331 ರ ಡಿಯೋ ಹೊಂಡಾ ಬೈಕಿನಲ್ಲಿ ತಮ್ಮ ಗ್ರಾಮವಾದ ಹೊಳೆನರಸೀಪುರ ತಾಲ್ಲೂಕು ಹರಳಹಳ್ಳಿ ಗ್ರಾಮದಿಂದ ಹೊರಟು ಹೊಳೆನರಸೀಪುರಕ್ಕೆ ಹೋಗುತ್ತಿದ್ದಾಗ ಹೊಳೆನರಸೀಪುರ ಟೌನ್ ಹಾಸನ ಮೈಸೂರ ಮುಖ್ಯ ರಸ್ತೆ ಕೆ.ಇ.ಬಿ ಸಮೀಪ ರಸ್ತೆಯಲ್ಲಿ ಬೈಕ್ ಚಾಲನೆ ಮಾಡಿಕೊಂಡು ಮಧ್ಯಹ್ನ 3.00 ಗಂಟೆಯ ಸಮಯದಲ್ಲಿ ಹೊಳೆನರಸೀಪುರ ಕಡೆಗೆ ಹೋಗುತ್ತಿದ್ದಾಗ ಇದೆ ಸಮಯಕ್ಕೆ ಮೈಸುರು ಕಡೆಯಿಂದ ಬಂದ ಕೆಎ–13–ಎನ್–3890 ಕಾರು ಚಾಲಕ ಆಸಾಮಿ ಕಾರನ್ನು ಅತಿವೇಗ

ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಚಾಸಾ.1 ಮತ್ತು ಚಾಸಾ.2 ರವರು ಹೋಗುತ್ತಿದ್ದ ಬೈಕಿಗೆ ಹಿಂಬದಿಯಿಂದ ಡಿಕ್ಕಿಪಡಿಸುವುದರ ಮೂಲಕ ಭಾರತೀಯ ನ್ಯಾಯ ಸಂಹಿತೆ 281 ರಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ ಎಂದು ಆಪಾದಿಸಲಾಗಿರುತ್ತದೆ.

ಮುಂದುವರೆದು ಮೇಲೆ ತಿಳಿಸಿದ ದಿನಾಂಕ, ಸ್ಥಳ ಹಾಗೂ ಸಮಯದಂದು ಆರೋಪಿಯಾದ ನೀವು ಕೆಎ–13–ಎನ್–3890 ಕಾರು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಡಿಕ್ಕಿಪಡಿಸಿದ್ದರಿಂದ ಮತ್ತು ಚಾಸಾ.2ರವರಿಗೆ ಬಲಭುಜಕ್ಕೆ ಬಲಪಕ್ಕೆಗೆ ಎಡರುಂಡಿಗೆ ಸೊಂಟಕ್ಕೆ ಪೆಟ್ಟು ಬಿದ್ದು ಗಾಯಗಳು ಆಗಿದ್ದು ಮತ್ತು ಚಾಸಾ.1ರವರಿಗೂ ಸಹ ಬಲಗಾಲು ಮಂಡಿಗೆ, ಹಿಮ್ಮಡಿಗೆ, ಮತ್ತು ತೊಡೆಗೆ ಪೆಟ್ಟು ಬಿದ್ದು ಗಾಯಗಳಾಗಿದ್ದ ಚಾಸಾ.1ರವರಿಗೆ ಆಗಿರುವ ಎಲ್ಲಾ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡುವುದರ ಮೂಲಕ ಭಾರತೀಯ ನ್ಯಾಯ ಸಂಹಿತೆ 125(ಎ)ರಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ ಎಂದು ಆಪಾದಿಸಲಾಗಿರುತ್ತದೆ.

ಮುಂದುವರೆದು ಮೇಲೆ ತಿಳಿಸಿದ ದಿನಾಂಕ, ಸ್ಥಳ ಹಾಗೂ ಸಮಯದಂದು ಆರೋಪಿಯಾದ ನೀವು ಕೆಎ–13–ಎನ್–3890 ಕಾರು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಡಿಕ್ಕಿಪಡಿಸಿದ್ದರಿಂದ ಚಾ.ಸಾ.2 ರವರಿಗೆ ಆಗಿರುವ ಎಲ್ಲಾ ಗಾಯಗಳು ಪೈಕಿ 1,2,3 ಸಾಮಾನ್ಯ ಸ್ವರೂಪ ಮತ್ತು 4ನೇ ಗಾಯ ತೀವ್ರಸ್ವರೂಪದ ಗಾಯಗಳನ್ನುಂಟು ಮಾಡುವುದರ ಮೂಲಕ ಭಾರತೀಯ ನ್ಯಾಯ ಸಂಹಿತೆ 125(ಬಿ)ರಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ ಎಂದು ಆಪಾದಿಸಲಾಗಿರುತ್ತದೆ.

ಪ್ರಶ್ನೆ 1– ಃ ನಿಮ್ಮ ಮೇಲೆ ಹೊರಿಸಲಾಗಿರುವ ಆಪಾದನೆಯನ್ನು ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಆರೋಪಿಯ ಉತ್ತರ

ಪ್ರಶ್ನೆ 2ಃ ನೀವು ಸದರಿ ಆಪಾದನೆಯನ್ನು ಒಪ್ಪಿಕೊಳ್ಳುವಿರಾ? ಅಥವಾ ನಿಮ್ಮ ವಿರುದ್ದ ವಿಚಾರಣೆಯ ನಡೆಯಬೇಕೆ?

ಆರೋಪಿಯ ಉತ್ತರ

ಮೇಲ್ಕಂಡಂತೆ ಆಪಾದನೆಯನ್ನು ಆಪಾದಿತರಿಗೆ ತಿಳಿದ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಬರೆದುಕೊಂಡಿರುವುದಾಗಿ ದೃಢೀಕರಿಸುತ್ತೇನೆ.

ತಾ ಃ

ಸ್ಥಳ ಃ ಹೊಳೆನರಸೀಪುರ.

ಪ್ರಧಾನ ಸಿಜೆ & ಜೆ ಎಂ ಎಫ್ ಸಿ
ಹೊಳೆನರಸೀಪುರ.